ಅವಶ್ಯಕತೆ ಇರುತ್ತದೆ. ರೈತರ ಬಗ್ಗೆ ಬಹಳ ಕಾಳಜಿ ಇರತಕ್ಕಂಥ ಸರ್ಕಾರದವರು ಈ ಶೈತ್ಯಾಗಾರವನ್ನು ಬಹಳ ತೀವ್ರವಾಗಿ ಕಟ್ಟಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದ ಮಂತ್ರಾಂತರವಾಗಿಯಾಗಲಿ ಅಥವಾ ವಿ ಸಿ. ಬ್ಯಾಂಕ್ ಮುಖಾಂತರವಾಗಿಯಾಗಲಿ ಬೇರೆ ಯಾವ ಮುಖಾಂತರವಾಗಿಯಾದರೂ ತೀವ್ರ ಕ್ರಮ ತೆಗೆದುಕೊಂಡು ಈ ವರ್ಷದಲ್ಲಿಯೇ ಧಾರವಾಡದಲ್ಲಿ ಶೀತಾಗಾರ ಕಟ್ಟಡವನ್ನು ಕಟ್ಟಲು ಪ್ರಾರಂಭ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೇ ಶೈತ್ಯಾಗಾರ ಕಟ್ಟಡದ ನಿರ್ಮಾಣಕ್ಕೆ ಬೇಕಾದಂಥ ಸಂಸ್ಥೆಯವರು ಒಂದು ಎಕರೆ ಜಮೀನನ್ನು ಜಾಗವನ್ನು ಈಗಾಗಲೇ ವ್ಯವಸಾಯೋತ್ಪನ್ನ ಮಾರ್ಕೆಟಿಂಗ್ ಸಂಸ್ಥೆಯಿಂದ ೧೯೮೫ನೇ ಇಸವಿಯಲ್ಲಿ ಮೂವತ್ತು ಸಾವಿರ ರೂಪಾಯಿಗಳಿಗೆ ಕೊಂಡುಕೊಳ್ಳಲಾಗಿದೆ. ಈ ಯೋಜನೆಯನ್ನು ಸಾಮಾನ್ಯವಾಗಿ ಜಾಗತಿಕ ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್ ತೆಗೆದುಕೊಂಡು ಕಟ್ಟಬೇಕಾಗಿದೆ. ವರ್ಲ್ಡ್‌ಬ್ಯಾಂಕ್ ಅಸಿಸ್ಟೆನ್ಸ್ ತೆಗೆದುಕೊಳ್ಳಬೇಕೆಂದರೆ ೨-೩ ವರ್ಷಗಳೇ ಆಗುತ್ತದೆ. ಈಗ ಅಂತಿಮಘಟ್ಟಕ್ಕೆ ಬಂದಂ ಕಟ್ಟಡಕ್ಕೆ ಬೇಕಾದ ಹಣ ಮಂಜೂರಾಗುವ ಸ್ಥಿತಿಯಲ್ಲಿದೆ. ಮಾನ್ಯ ಸದಸ್ಯರು ಇನ್ನು ಒಂದಂ ವರ್ಷದಲ್ಲಿಯೇ ಕಟ್ಟಲಾಗುತ್ತದೆಯೇ ಎಂದಂ ಕೇಳಿರುತ್ತಾರೆ. ಹಣ ಮಂಜೂರಾದ ತಕ್ಷಣವೇ ಅಂದರೆ ಒಂದು ವರ್ಷಕ್ಕೆ ಮುಂಚಿತವಾಗಿಯೇ ಪ್ರಾರಂಭ ಮಾಡುವ ಸೂಚನೆ ಇದೆ ಎಂದು ತಿಳಿಸಬಯಸುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಬಹಳ ಅವಶ್ಯಕವಾಗಿ ಧಾರವಾಡಕ್ಕೆ ಒಂದು ಶೈತ್ಯಾಗಾರ ಕಟ್ಟಡಬೇಕಾಗಿದೆ, ಏತಕ್ಕೆಂದರೆ ಇಡೀ ಕರ್ನಾಟಕದಲ್ಲಿ ಬಹಳ ಉತ್ತಮವಾದ ಆಲೂಗೆಡ್ಡೆಯನ್ನು ಧಾರವಾಡದಲ್ಲಿ ಬೆಳೆಯುತ್ತಿದ್ದಾರೆ. ಆದ್ದರಿಂದ ರೈತರಿಗೆ ಅವಶ್ಯಕವಾಗಿ ಬೀಜಗಳನ್ನು ಸಂಗ್ರಹಣೆ ಮಾಡಿಕೊಳ್ಳುವ ಸಲುವಾಗಿ ಮತ್ತು ಆಲೂಗೆಡ್ಡೆಯನ್ನು ಪೂರೈಕೆ ಮಾಡಲು ಶೈತ್ಯಾಗಾರವನ್ನು ಆದಷ್ಟು ತೀರ್ವವಾಗಿ ಕಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಒಳ್ಳೆಯದು. ಆಗಬಹುದಂ. ಈಗಾಗಲೇ ಹೇಳಿದ್ದೇನೆ ಒರೇ ಧಾರವಾಡದಲ್ಲಿ ಒಂದೇ ಕಡೆಯಲ್ಲ, ಎಲ್ಲ ಕೇಂದ್ರಗಳಲ್ಲೂ ಶೈತ್ಯಾಗಾರಗಳ ನಿರ್ಮಾಣಕ್ಕಾಗಿ ಎರಡೂಕೋಟಿ ರೂಪಾಯಿಗಳ ಯೋಜನೆ ಫೈನಲೈಸ್ ಆಗುವಂತ ಪರಿಸ್ಥಿತಿ ಇದೆ, ಅದಂ ಆದ ತಕ್ಷಣ ಈ ಕೆಲಸವನ್ನು ತೆಗೆದುಕೊಂಡು ಮಾಡುತ್ತೇವೆ.

ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳನ್ನು ಪ್ರಾರಂಭಿಸುವುದರ ಕುರಿತಂ

೧೨೭೧ ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ಪ್ರಾರಂಭಿಸಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳೆಷ್ಟು ? (ಕಲಾ ಮತ್ತು ವಿಜ್ಞಾನ ಕಾಲೇಜುಗಳ ವಿವರ ನೀಡುವುದು)

ಆ) ಆ ಪೈಕಿ, ಸ್ವಂತ ಕಟ್ಟಡಗಳನ್ನು ಹೊಂದಿರುವ ಮತ್ತು ಹೊಂದಿಲ್ಲದ ಕಾಲೇಜುಗಳೆಷ್ಟು ?

ಇ) ಸ್ವಂತ ಕಟ್ಟಡಗಳನ್ನು ಕಟ್ಟಲು ಕೈಗೊಂಡ ಕ್ರಮಗಳೇನು ?

ಈ) ಕೆಲವು ಕಡೆ ಕಾಲೇಜುಗಳಿದ್ದರೂ (ಖಾಸಗಿ) ಸರಿಯಾದ ಪೀಠೋಪಕರಣ, ಕಟ್ಟಡಗಳು, ಬೋಧಕ ವರ್ಗದವರಿಲ್ಲದಿರುವ ಸರ್ಕಾರಿ ಕಾಲೇಜನ್ನು ಪ್ರಾರಂಭಿಸುವ ಸರ್ಕಾರದವರ ಚಿಂತನೆ ಏನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಕಳೆದ ಮೂರು ವರ್ಷಗಳಿಂದ ಸ್ಥಾಪಿಸಿರುವ ಪ್ರಥಮದರ್ಜೆ ಕಾಲೇಜುಗಳ ವಿವರ ಈ ಕೆಳಗೆ ನಮೂದಿಸಿದೆ.

೧)	೧೯೮೫-೮೬	ಕಲಾ ಕಾಲೇಜುಗಳು ಪಟ್ಟಿಲ್ಲ
೨)	೧೯೮೬-೮೭	
೩)	೧೯೮೭-೮೮	

ಅ) ಈ ಪೈಕಿ ಯಾವ ಪ್ರಥಮದರ್ಜೆ ಕಾಲೇಜುಗಳೂ ಸ್ವಂತ ಕಟ್ಟಡ ಹೊಂದಿರುವುದಿಲ್ಲ.

ಇ) ಮೊದಲನೆಯದಾಗಿ, ಪ್ರಥಮದರ್ಜೆ ಕಾಲೇಜುಗಳಿಗೆ ಅಗತ್ಯವಿರುವ ನಿವೇಶನಗಳನ್ನು ಹೊಂದಲು ಸಂಬಂಧಿಸಿದ ಪ್ರಾಧಿಕಾರಗಳೊಂದಿಗೆ ವ್ಯವಹರಿಸುತ್ತಿದ್ದು, ನಿವೇಶನ ಹೊಂದಿರುವ ಕಾಲೇಜುಗಳಿಗೆ ಹಣ ಒದಗಿಸಿ, ಕಟ್ಟಡ ನಿರ್ಮಾಣಕ್ಕಾಗಿ ಸೂಕ್ತ ಕ್ರಮ ಜರುಗಿಸಲಾಗುವುದು.

ಈ) ಸ್ಥಳೀಯ ಶಾಸಕರ ಸಾರ್ವಜನಿಕರ ಬೇಡಿಕೆ ಮತ್ತು ಅಗತ್ಯತೆ ಆಧಾರದ ಮೇಲೆ. ಕಾಲೇಜುಗಳ ಮಂಜೂರಾತಿ ಆಗಿದೆ.

ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು, ಇದಕ್ಕೆ ಸಾರ್ವಜನಿಕರೂ ಸಹಕರಿಸಬೇಕು.

ಶ್ರೀ ಐ. ಬಿ. ಶಂಕರ್.—ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ೧೯೮೫-೮೬ರಲ್ಲಿ ೧೬ ಕಾಲೇಜುಗಳು, ೧೯೮೬-೮೭ಕ್ಕೆ ಏನೂ ಇಲ್ಲ. ೧೯೮೭-೮೮ಕ್ಕೆ ಎಂಟು ಎಂದು ಹೇಳಿದ್ದಾರೆ. ಆದರೆ ಇಲ್ಲಿ ೬ ಎಂದು ಕೊಟ್ಟಿದ್ದಾರೆ. ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಏನೆಂದರೆ ದಯವಿಟ್ಟು ವಲ್ಲ ಕಡೆ ಕಲಾಕಾಲೇಜನ್ನು ಕೊಡಬೇಕೆಂದು ಈಗ ಫಸ್ಟ್‌ಕ್ಲಾಸ್‌ನಲ್ಲಿ ಪಾಸ್ ಮಾಡಿರುವ ಸ್ಟೂಡೆಂಟ್ಸ್‌ಗಳಿಗೂ ಸಹಿತ ಸೀಟುಗಳು ಸಿಗುತ್ತಿಲ್ಲ. ಆದ್ದರಿಂದ ಸೈನ್ಸ್ ಸೆಕ್ಷನನ್ನು ಓಪನ್ ಮಾಡಬೇಕಾದ್ದು ಬಹಳ ಆಗತ್ಯವಿದೆ. ಸೈನ್ಸ್ ಸೆಕ್ಷನ್ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ ಕಾಲೇಜನ್ನು ಕೊಡಬೇಕಾದರೆ ಸಂಬಂಧಪಟ್ಟಹಾಗೆ ಜಾಗ ಮತ್ತು ಸ್ಕೂಲ್ ವಾತಾವರಣವನ್ನು ಪರಿಶೀಲನೆ ಮಾಡಿ ಇದೇರೀತಿಯಲ್ಲಿರಬೇಕು ಏನನ್ನುವ ಬಗ್ಗೆ ನೀತಿ ನಿಯಮಗಳನ್ನು ಏನಾದರೂ ಸರ್ಕಾರ ಹೊಂದಿದೆಯೇ ? ಚಿಕ್ಕಮಗಳೂರು ಲಾಲ್‌ಬಹದ್ದೂರ್‌ಶಾಸ್ತ್ರಿ ಜೂನಿಯರ್ ಕಾಲೇಜಿಗೆ ಸೈನ್ಸ್ ವಿಭಾಗಬೇಕೆಂದು ಪ್ರಾರ್ಥನೆ ಮಾಡಿಕೊಂಡಿದ್ದೆ. ಆದರ ಬಗ್ಗೆ ಸರ್ಕಾರದಪರವಾ ತೆಗೆದುಕೊಂಡ ನಿಲುವಿನ ಬಗ್ಗೆ ತಿಳಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಅಧ್ಯಕ್ಷರೇ, ಸುಮಾರು ೧೬ ಕಾಲೇಜುಗಳಲ್ಲಿ ವಿಜ್ಞಾನ ಶಿಕ್ಷಣವನ್ನು ಪ್ರಾರಂಭಮಾಡಬೇಕೆಂಬ ಯೋಚನೆ ಸರ್ಕಾರದ ಮುಂದೆ ಇದೆ ಕೆಲವಾರು ಕಾಲೇಜುಗಳಲ್ಲಿ ಹಣಕಾಸಿನ ಪರಿಸ್ಥಿತಿ ಕೆಟ್ಟದಾಗಿರುವುದರಿಂದ ಈ ವರ್ಷ ವಿಜ್ಞಾನ ವಿಭಾಗವನ್ನು ತೆರೆಯಲಿಕ್ಕೆ ಆಗಲಿಲ್ಲ. ೧೯೮೫-೮೬ನೇ ಸಾಲಿಗೆ ಪ್ರಾರಂಭಿಸಿದ ಎಲ್ಲ ಪ್ರಥಮ ದರ್ಜೆ ಕಾಲೇಜುಗಳಿಗೂ ಭೋದಕರ ಹುದ್ದೆಗಳನ್ನು ತುಂಬಲಾಗಿದೆಯಲ್ಲದೆ ಈ ವರ್ಷ ಇನ್‌ಫ್ರಾಸ್ಟ್ರಕ್ಚರನ್ನು ಕ್ರಿಯೇಟ್ ಮಾಡುತ್ತಿದ್ದೇವೆ.

ಶ್ರೀ ಐ. ಬಿ. ಶಂಕರ್.—ನಾನು ಕೇಳಿದ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರ ಕೊಡಲಿಲ್ಲ. ಕಳೆದ ಎರಡು ವರ್ಷಗಳಿಂದಲೂ ಸೈನ್ಸ್ ಕಾಲೇಜನ್ನು ಪ್ರಾರಂಭಿಸುತ್ತೇವೆಂದು ಭರವಸೆ ಕೊಡುತ್ತಲೇ ಇದ್ದಾರೆ. ಇನ್ನು ಎಷ್ಟು ದಿನಗಳಲ್ಲಿ ವಿಜ್ಞಾನ ಕಾಲೇಜನ್ನು ಪ್ರಾರಂಭಿಸಲಾಗುವುದು ಎಂಬುದನ್ನು ಹೇಳಲಿಲ್ಲ.

ಶ್ರೀ ಜೀವರಾಜ ಆಳ್ವ.—ಕೆಲವಾರು ಪ್ರಸ್ತಾವನೆಗಳು ಸರ್ಕಾರದ ಮುಂದಿವೆ ಎಂದು ಹೇಳಿದ್ದೇನೆ. ಅದರಲ್ಲಿ ಮಾನ್ಯ ಸದಸ್ಯರ ಸಲಹೆ ಕೂಡ ಇದೆ.

ಶ್ರೀ ಐ. ಬಿ. ಶಂಕರ್.—ನಮ್ಮಲ್ಲಿ ಕಟ್ಟಡ ಇದೆ, ಪ್ರಯೋಗಶಾಲೆ ಇದೆ. ಆದ್ದರಿಂದ ಸರ್ಕಾರಕ್ಕೆ ಹೆಚ್ಚಿನ ಹೊರೆ ಬರುವುದಿಲ್ಲ. ಇಷ್ಟೆಲ್ಲಾ ಹಾರಿಕೆ ಉತ್ತರ ಕೊಡುತ್ತಿದ್ದಾರೆ. ೫ ವರ್ಷಗಳಿಂದ ಪ್ರಯತ್ನ ಮಾಡಿದರೂ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಸೈನ್ಸ್ ವಿಭಾಗದಲ್ಲಿ ಸೀಟನ್ನು ಕೊಡುವುದಕ್ಕಾಗುತ್ತಿಲ್ಲ. ಸಾವಿರಾರು ಅರ್ಜಿಗಳು ಬಂದ ಕಡೆ ೫೦ ಸೀಟುಗಳನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತಿದೆ. ಆದ್ದರಿಂದ ಸೈನ್ಸ್ ಸೆಕ್ಷನ್ ಅನ್ನು ಓಪನ್ ಮಾಡುವುದಕ್ಕೆ ಆದೇಶ ಕೊಡಬೇಕು.

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ವೇದಾಂತ ಹೆಬ್ಬಾರ್.—ಇಲ್ಲಿ ಕಟ್ಟಡದ ಬಗ್ಗೆ ವಿವರ ಕೊಟ್ಟಿದ್ದೀರಿ. ನನ್ನ ಪ್ರಶ್ನೆ ಏನೆಂದರೆ ಕಟ್ಟಡ ಇದ್ದು ಶಿಕ್ಷಕರು ಇದ್ದು ವಿದ್ಯಾರ್ಥಿಗಳಿಲ್ಲದೆ ಇರುವ ಕಾಲೇಜುಗಳು ಎಷ್ಟಿವೆ ಹೇಳಿ ಸರಾ ?

ಶ್ರೀ ಜೀವರಾಜ ಆಳ್ವ.—ಅದಕ್ಕೆ ಬೇರೆ ಪ್ರಶ್ನೆ ಕೇಳಬೇಕಾಗುತ್ತದೆ.

ಶ್ರೀ ಬಿ. ಬಿ. ನಿಂಗಯ್ಯ.—ಮಾನ್ಯ ಸ್ನೇಹಿತರು ಬಹಳ ಉತ್ತಮವಾದ ಪ್ರಶ್ನೆ ಕೇಳಿದ್ದಾರೆ. ೧೯೮೫-೮೬ರಲ್ಲಿ ೧೬ ಕಾಲೇಜುಗಳನ್ನು. ೮೬-೮೮ರಲ್ಲಿ ೮ಕಾಲೇಜುಗಳನ್ನು ಅಂದರೆ ಒಟ್ಟು ೨೪ ಕಾಲೇಜುಗಳನ್ನು ಪ್ರಾರಂಭಿಸಿದ್ದೀರಿ. ೧೯೮೫-೮೬ರಲ್ಲಿ ನಮ್ಮ ತಾಲ್ಲೂಕಿಗೆ ಒಂದು ಕಾಲೇಜನ್ನು ಸರ್ಕಾರ ಮಂಜೂರ್ಮಾಡಿದ್ದು, ಕಳೆದ ೪ ವರ್ಷಗಳಿಂದ ಕಟ್ಟಡವಿಲ್ಲದೆ ಆ ಕಲಾ ಮತ್ತು ವಾಣಿಜ್ಯ ಕಾಲೇಜನ್ನು ಜೂನಿಯರ್ ಕಾಲೇಜಿನಲ್ಲಿ ಅವರಿಗೆ ತೊಂದರೆ ಕೊಟ್ಟುಕೊಂಡು ನಡೆಸಂತ್ತಿದ್ದೇವೆ. ಪದೇ ಪದೇ ಕೇಳಿದರೂ ಕಟ್ಟಡಕ್ಕೆ ಹಣ ಮಂಜೂರ್ಮಾಡಲಿಲ್ಲ. ಇದನ್ನು ಸಚಿವರು ಯಾವಾಗ ಪರಿಹಾರ ಕೊಡುತ್ತಾರೆಂದು ಕೇಳುತ್ತೇನೆ.

ಶ್ರೀ ಜೀವರಾಜ ಆಳ್ವ.—ಈ ಎಲ್ಲಾ ಪ್ರಸ್ತಾವನೆಗಳು ಸರ್ಕಾರದ ಮುಂದಿವೆ. ಸರ್ಕಾರಕ್ಕೆ ಹಣಕಾಸಿನ ತೊಂದರೆಯಾಗಿದೆ. ೨೪ ಕಾಲೇಜುಗಳಲ್ಲಿ ಕೆಲವಕ್ಕೆ ಕಟ್ಟಡ ಕಟ್ಟಿಸಿಕೊಡುವ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ

ಅಧ್ಯಕ್ಷರು.—ವೀರಯ್ಯಸ್ವಾಮಿಯವರ ೧೭೮೭ನೇ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ. ಅವರ ಪ್ರಶ್ನೆಗೆ ಯಾವಾಗ ಉತ್ತರಿಸುತ್ತೀರಿ ಚಂದ್ರಶೇಖರ್‌ರವರೇ ?

ಶ್ರೀ ಎಂ. ಚಂದ್ರಶೇಖರ್.—ಜಿಲ್ಲಾವಾರು ರಸ್ತೆಗಳ ಬಗ್ಗೆ ವಿಪರೀತ ಮಾಹಿತಿ ಕೇಳಿದ್ದಾರೆ. ೩ ವಾರವಾದರೂ ಸಮಯ ಬೇಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ಇಲಾಖೆಯದು ಮೇ ೩೧, ಜೂನ್ ೬ ಮತ್ತು ೧೩ ರಂದು ಇದೆ. ಯಾವಾಗ ಉತ್ತರ ಹೇಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಜೂನ್ ೧೩ ರಂದು ಉತ್ತರಿಸುತ್ತೇನೆ.

ಅಧ್ಯಕ್ಷರು.—ಹಾಜರಿದ್ದ ಸದಸ್ಯರ ಹೆಸರುಗಳನ್ನು ಮಂತ್ರೊಮ್ಮೆ ಕರೆಯಂತ್ತೇನೆ.

(ಶ್ರೀಯುತರುಗಳಾದ ಬಾಬುರೆಡ್ಡಿ ತುಂಗಳ್, ಎ, ಕೃಷ್ಣಪ್ಪ, ಎ. ಬಿ. ದೇಸಾಯಿ, ಕೆ. ಬಿ. ಕೋಳಿವಾಡ, ಶ್ರೀಮತಿ ಸುಮಾವಸಂತ್ ಇವರುಗಳು ಹಾಜರಿರಲಿಲ್ಲ.)

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಬಿಜಾಪುರ ಜಿಲ್ಲೆಯಲ್ಲಿ ಸರಕಾರಿ ಪದವೀ ಕಾಲೇಜು

೧೫೨೪. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ) —ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಎಷ್ಟು ತಾಲ್ಲೂಕು ಕೇಂದ್ರಗಳಲ್ಲಿ ಸರ್ಕಾರಿ ಪದವೀ ಕಾಲೇಜುಗಳಿವೆ ?

ಆ) ತಾಲ್ಲೂಕು ಕೇಂದ್ರವಾದ ಬಿಜಾಪುರ ಜಿಲ್ಲೆಯ ಬೀಳಗಿಯಲ್ಲಿ ಪದವಿ ಕಾಲೇಜು ಪ್ರಾರಂಭಿಸಲು ಪ್ರಾಸಗಿ ಶಿಕ್ಷಣ ಸಂಸ್ಥೆಯವರು ಯಾರಾದರೂ ಮುಂದೆ ಬಂದಿದ್ದಾರೆಯೇ ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

ಅ) ಯಾವುದೂ ಇಲ್ಲ

ಆ) ಹೌದು

ಇ) ಆಗ ಕಾಲೇಜಿಗೆ ಮಂಜೂರಾತಿ ನೀಡಲು ಶಿಫಾರಸ್ಸು ಮಾಡಿದ್ದೆವು.